

# ಮರಳಿ ಬಂದ ಕರೀನಾ

ಚೊಚ್ಚಲ ತಾಯ್ತನದ ಬಳಿಕ ಕರೀನಾ ಕಪೂರ್ ಮರಳಿ ಬೆಳ್ಳಿತೆರೆಗೆ ದಾಳಿ
ಇಟ್ಟಿದ್ದಾಳೆ. 'ವೀರೇ ಡಿ ವೆಡಿಂಗ್' ಎನ್ನುವ ಹೊಸ ಚಿತ್ರದಲ್ಲಿ ಆಕೆಯೇ
ಹೀರೋಯಿನ್. ಜತೆಗೆ ಸೋನಂ ಕಪೂರ್ ಇನ್ನೊಬ್ಬ ಹೀರೋಯಿನ್. ಈ
ಇಬ್ಬರೂ ಸಾಲದು ಎನ್ನುವಂತೆ ಸ್ವರಾ ಭಾಸ್ಕರ್ ಮತ್ತು ಶಿಖಾ ಎನ್ನುವ ಇನ್ನೂ
ಇಬ್ಬರು ನಟಿಯರು ಪ್ರಮುಖ ಪಾತ್ರದಲ್ಲಿದ್ದಾರಂತೆ. ಅಂದ ಹಾಗೆ ಈ ಚಿತ್ರದಲ್ಲಿ
ಕರೀನಾಳದ್ದು ಗರ್ಭಿಣಿಯ ಪಾತ್ರವಂತೆ. ನಿಜಜೀವನದಲ್ಲಿ ಗರ್ಭಿಣಿಯಾದದ್ದು
ಒಂದು ದೃಷ್ಟಿಯಲ್ಲಿ ಒಳ್ಳೆಯದೇ ಆಯಿತು. ಈ ಚಿತ್ರದ ಪಾತ್ರಕ್ಕೆ ಭಾವ
ತುಂಬಲು ನಿಜಜೀವನದ ಅನುಭವ ಸಾಕಷ್ಟು ನೆರವಾಗಿದೆ ಎನ್ನುವುದು ಕರೀನಾ
ಅಂಬೋಣ.

ಸೋನಂ ಹೋಮ್ ಪ್ರೊಡಕ್ಷನ್ ಆಗಿರುವ ಈ ಚಿತ್ರದ ನಿರ್ದೇಶಕ ಶಶಾಂಕ
ಘೋಷ್. ಆದರೆ ಚಿತ್ರದ ಶೂಟಿಂಗ್ ಶುರುವಾಗುವ ಮುನ್ನವೇ ಟೈಟಲ್ ಕುರಿತ
ವಿವಾದ ಹೊರಬಿದ್ದಿದೆ. 'ವೀರೇ ಕಿ ವೆಡಿಂಗ್' ಎನ್ನುವ ಹೆಸರಿನ ಇನ್ನೊಂದು
ಸಿನಿಮಾ ಈಗಾಗಲೆ ಶೇಕಡಾ 50ರಷ್ಟು ಶೂಟಿಂಗ್ ಮುಗಿಸಿದೆಯಂತೆ. ಸದ್ಯಕ್ಕೆ
ಸಹ ನಿರ್ಮಾಪಕ ಅನಿಲ್ ಕಪೂರ್ ಚಿತ್ರಕ್ಕೆ
ಇನ್ನೊಂದು ಹೆಸರು ಹುಡುಕುವುದರಲ್ಲಿ
ಬ್ಯುಸಿ ಆಗಿದ್ದಾರಂತೆ!



# ಮತ್ತೊಮ್ಮೆ ಸಿಂಗಂ

ಅಜಯ್ ದೇವಗನ್‌ಗೆ ಅಪಾರ ಖ್ಯಾತಿ ತಂದುಕೊಟ್ಟ ಚಿತ್ರ
ಸಿಂಗಂ. ತಮಿಳಿನಲ್ಲಿ ನಟ ಸೂರ್ಯ ನಿರ್ವಹಿಸಿದ ಇನ್ಸ್‌ಪೆಕ್ಟರ್
ಬಾಜಿರಾವ್ ಪಾತ್ರವನ್ನು ಅಜಯ್ ತನ್ನ ಮ್ಯಾನರಿಸಂ
ಮೂಲಕ ಹೊಸ ಎತ್ತರಕ್ಕೆ ಒಯ್ದಿದ್ದ. ನಿರ್ದೇಶಕ ರೋಹಿತ್
ಶೆಟ್ಟಿ ರೂಪಿಸಿದ ಮೈನವಿರೇಳಿಸಿದ ಸ್ಟಂಟ್‌ಗಳಂತೂ ಚಿತ್ರಕ್ಕೆ
ಹೌಸ್‌ಫುಲ್ ಬೋರ್ಡ್ ಬೀಳಲು ಕಾರಣವಾಯಿತು. ಈ
ಯಶಸ್ಸಿನ ಹಿನ್ನೆಲೆಯಲ್ಲೇ 'ಸಿಂಗಂ ರಿಟರ್ನ್ಸ್' ಬಂತು. ಆ
ಸಿನಿಮಾ ಕೂಡಾ ಬಾಕ್ಸಾಫೀಸ್ ಕೊಳ್ಳೆ ಹೊಡೆಯಿತು. ಇದೀಗ
'ಸಿಂಗಂ 3' ಬರುವ ಸುದ್ದಿ ಬಂದಿದೆ.
ಆದರೆ 'ಸಿಂಗಂ 3' ಎರಡೆರಡು ಸಿನಿಮಾಗಳು
ತಯಾರಾಗುತ್ತಿರುವುದು ವಿಶೇಷ! ಮೊದಲು ಸಿಂಗಂ 3
ಸಿನಿಮಾವನ್ನು ಘೋಷಿಸಿದ್ದು ನಿರ್ಮಾಪಕ ಜಯಂತಿಲಾಲ್
ಗಾಡ. ಆ ಚಿತ್ರದಲ್ಲಿ ನಾಯಕ ಸನ್ನಿ ಡಿಯೊಲ್. ತಮಿಳಿನಲ್ಲಿ
ಸೂರ್ಯ ನಿರ್ವಹಿಸಿದ ಸಿಂಗಂ 3 ಕಥೆಯನ್ನೇ ಹಿಂದಿಯಲ್ಲಿ
ಮಾಡಲಾಗುತ್ತಿದೆ ಎಂದು ಅವರು ಘೋಷಿಸಿದರು.
ಸನ್ನಿ ಡಿಯೊಲ್ ಈ ಚಿತ್ರಕ್ಕೆ ಸಹಿ ಹಾಕುವ ಮುನ್ನ
ಸೌಜನ್ಯವೆಂಬಂತೆ ಅಜಯ್ ದೇವಗನ್ ಗೆ ಫೋನ್ ಮಾಡಿ
ವಿಷಯ ತಿಳಿಸಿದನಂತೆ. ಅಜಯ್ ನಕ್ಕು ಸುಮ್ಮನಾದನಂತೆ.
ಆದರ ಇದೀಗ ಅಜಯ್ ದೇವಗನ್ 'ಸಿಂಗಂ 3 ಸಿನಿಮಾ
ಶೀಘ್ರದಲ್ಲೇ ರೋಹಿತ್ ಶೆಟ್ಟಿ ನಿರ್ದೇಶನದಲ್ಲಿ ಸೆಟ್ಟೇರಲಿದೆ.
ನಾನೇ ನಾಯಕ' ಎಂದಿದ್ದಾನೆ! ಅಂದ ಹಾಗೆ ಸನ್ನಿ ಡಿಯೊಲ್
ಚಿತ್ರಕ್ಕೆ ಈಗ 'ಎಸ್3' ಎಂದು ಹೆಸರಿಡಲಾಗಿದೆಯಂತೆ!